# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 12.11.2020ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

| | |
|---|---|
| 1. **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು<br>ಮಂಗಳೂರು ವಿಶ್ವವಿದ್ಯಾನಿಲಯ,<br>**ಮಂಗಳಗಂಗೋತ್ರಿ–574 199.** | **ಅಧ್ಯಕ್ಷರು** |
| 2. **ಡಾ. ಅಪ್ಪಾಜಿ ಗೌಡ, ಎಸ್. ಬಿ,**<br>ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ,<br>**ಮಂಗಳೂರು – 560 001.**<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. **ಪ್ರೊ. ಬಿ. ಉದಯ,**<br>ಡೀನರು, ಕಲಾ ನಿಕಾಯ ಹಾಗೂ ಪ್ರಾಧ್ಯಾಪಕರು<br>ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ,<br>**ಮಂಗಳಗಂಗೋತ್ರಿ–574 199.** | – " – |
| 4. **ಪ್ರೊ. ಕರುಣಾಕರ್ ಎ. ಕೋಟೆಗಾರ್,**<br>**ಶ್ರೀ ಅಣ್ಣಪ್ಪ,**<br>ಆರ್.ಪಿ.ನಗರ, ಇಂದ್ರಾಳಿ ದೇವಸ್ಥಾನದ ಹತ್ತಿರ<br>**ಉಡುಪಿ – 576 012.** | – " – |
| 5. **ಶ್ರೀ. ರವಿಚಂದ್ರ ಪಿ. ಎಂ.**<br>ನಂ.103, ಫೂಜನ್ ಎನ್‌ಕ್ಲೇವ್<br>6ನೇ ಅಡ್ಡ ರಸ್ತೆ, ಗಾಂಧಿ ನಗರ, ಮಣ್ಣಗುಡ್ಡೆ,<br>**ಮಂಗಳೂರು – 575 001.** | – " – |
| 6. **ಡಾ. ಮಧುಸೂಧನ್ ಭಟ್,**<br>ಪ್ರಾಂಶುಪಾಲರು,<br>ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು,<br>ಕುಂಜಿಬೆಟ್ಟು, **ಉಡುಪಿ – 576 102.** | – " – |

..2

7. **ಶ್ರೀ. ಚಂದ್ರಶೇಖರ ದೀಕ್ಷಿತ್ ಹೆಚ್,** – " –
ಪ್ರಾಂಶುಪಾಲರು,
ಶ್ರೀ ಮಹಾವೀರ ಕಾಲೇಜು,
**ಮೂಡಬಿದರೆ– 574 197.**

8. **ಡಾ. ಕಬ್ಬಿನಾಲೆ ಬಾಲಕೃಷ್ಣ ಭಾರಧ್ವಾಜ್,** – " –
ಪ್ರಾಂಶುಪಾಲರು,
ಶಾರದಾ ಕಾಲೇಜು,
**ಮಂಗಳೂರು – 575 003.**

9. **ಶ್ರೀಮತಿ ಕಸ್ತೂರಿ ಜೆ. ಶೆಟ್ಟಿ,** – " –
ಪ್ರಾಂಶುಪಾಲರು,
ಶ್ರೀದೇವಿ ಕಾಲೇಜ್ ಆಫ್ ಫ್ಯಾಶನ್ ಡಿಸೈನ್,
ಬಲ್ಲಾಳ್‌ಬಾಗ್, **ಮಂಗಳೂರು – 575 003.**

10. **ಡಾ. ಎಂ. ಎಸ್. ತಳವಾರ,** – " –
ನಂ 777, "ಜೇನುಗೂಡು"
ಬನಶಂಕರಿ, 6ನೇ ಹಂತ, 5ನೇ ಬ್ಲಾಕ್,
ಮೆಟ್ಟಕಲ್ಲಪಾಳ್ಯ, **ಬೆಂಗಳೂರು – 560 085.**

11. **ಶ್ರೀ ಕೆ. ರಮೇಶ,** – " –
ನಂ. 1004, ಮಹಾಬಲೇಶ್ವರ ಕ್ಲಾಸಿಕ್ ರೂಬಿ,
ವಾಟರ್ ಟ್ಯಾಂಕ್ ಎದುರುಗಡೆ,
ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ, ಶಕ್ತಿನಗರ,
**ಮಂಗಳೂರು – 575 016.**

12. **ಡಾ. ಪಾರ್ವತಿ ಅಪ್ಪಯ್ಯ,** – " –
"ಹಿಮವನ" ಮುಳಿಯಾ ಬಡಾವಣೆ
ಎಫ್.ಎಂ.ಕೆ.ಎಂ.ಸಿ. ಕಾಲೇಜು ಹಿಂಭಾಗ,
ಮಡಿಕೇರಿ ಅಂಚೆ, **ಕೊಡಗು ಜಿಲ್ಲೆ**

13. **ಶ್ರೀ ಮೋಹನ್ ಪಡಿವಾಳ್,** – " –
"ಸಮ್ಮೇಧ" ಎಂ.ಎಸ್. ನಗರ,
11ನೇ ಅಡ್ಡರಸ್ತೆ, ತೆಲ್ಲಾರ್ ರಸ್ತೆ,
ಕಾರ್ಕಳ, **ಉಡುಪಿ ಜಿಲ್ಲೆ – 574 104.**

14. **ಶ್ರೀ ವಿವೇಕಾನಂದ ಪನಿಯಾಲ,** – " –
ಪನಿಯಾಲ ಹೌಸ್, ಕೊಡಿಯಾಳ ಗುತ್ತು
ಕೊಡಿಯಾಲ್ ಬೈಲು ಪೂರ್ವ ಮುಖ್ಯರಸ್ತೆ,
**ಮಂಗಳೂರು – 575004** .

**15. ಶ್ರೀ ರವೀಂದ್ರನಾಥ ರೈ, ವಕೀಲರು,** – " –
ಬಿನ್ ದಿ. ಕ್ಯಾಪ್ಟನ್ ಬಾಲಕೃಷ್ಣ ರೈ. ಬಿ. ಎಸ್.
"ಲಕ್ಷ್ಮೀ ನಿವಾಸ" 3ನೇ ಕ್ರಾಸ್, ಕೊಡಿಯಾಳ್‌ಗುತ್ತು ಪೂರ್ವ,
ಕೊಡಿಯಾಲ್ ಬೈಲ್ ಅಂಚೆ, **ಮಂಗಳೂರು – 3.**

**16. ಶ್ರೀ ಸಿಪ್ರಿಯನ್ ಮೊಂತೆರೊ,** – " –
ಪ್ರಾಂಶುಪಾಲರು,
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ, **ಮಂಗಳೂರು – 575 001.**
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

**17. ಪ್ರೊ. ಪಿ. ಎಲ್. ಧರ್ಮ,**
ಕುಲಸಚಿವರು (ಪರೀಕ್ಷಾಂಗ) – " –
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199**

**18. ಕೆ. ರಾಜು ಮೊಗವೀರ, ಕೆ.ಎ.ಎಸ್,** ಸದಸ್ಯ ಕಾರ್ಯದರ್ಶಿ
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199**

**ವಿಶೇಷ ಆಹ್ವಾನಿತರು:**

**19. ಪ್ರೊ. ಬಿ. ನಾರಾಯಣ,**
ಹಣಕಾಸು ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ತಾಂತ್ರಿಕ ಶಿಕ್ಷಣ ನಿರ್ದೇಶಕರು,** **ಸದಸ್ಯರು**
ಕರ್ನಾಟಕ ರಾಜ್ಯ
ಅರಮನೆ ರಸ್ತೆ, **ಬೆಂಗಳೂರು – 560 001.**

**2. ವೈದ್ಯಕೀಯ ಶಿಕ್ಷಣ ನಿರ್ದೇಶಕರು,** – " –
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
**ಬೆಂಗಳೂರು – 560 009.**

**3. ನಿರ್ದೇಶಕರು,** – " –
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, **ಬೆಂಗಳೂರು 560 003.**

**ಮಂಗಳೂರು ವಿಶ್ವವಿದ್ಯಾನಿಲಯ**

**ದಿನಾಂಕ 12.11.2020ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡಾವಳಿಗಳು.**

ಉಪಸ್ಥಿತ ಸದಸ್ಯರು:

ವಿಶೇಷ ಆಹ್ವಾನಿತರು:

ಅನುಪಸ್ಥಿತ ಸದಸ್ಯರು:

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು, ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯನ್ನು ಮುಂದುವರಿಸುವಂತೆ ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

1. ಸಿಂಡಿಕೇಟು ಸಭಾಂಗಣದಲ್ಲಿ ಸಭೆಯ ಕಾರ್ಯಕಲಾಪಗಳನ್ನು ಪ್ರಸ್ತುತ ಪಡಿಸಲು ಸದಸ್ಯರಿಗೆ ಸೂಕ್ತ ಮೈಕ್ ವ್ಯವಸ್ಥೆಯನ್ನು ಅಳವಡಿಸಿದ ವಿಶ್ವವಿದ್ಯಾನಿಲಯದ ಆಡಳಿತ ವರ್ಗಕ್ಕೆ ಎಲ್ಲಾ ಸದಸ್ಯರು ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28(1) (ಡಿ) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಪ್ರೊ. ಬಿ. ಉದಯ, ಡೀನರು, ಕಲಾ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಮಾನ್ಯ ಕುಲಸಚಿವರು ಸಿಂಡಿಕೇಟು ಸಭೆಗೆ ಸ್ವಾಗತಿಸಿದರು.

3. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28 (1) (ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟು ಸದಸ್ಯರುಗಳಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಪ್ರಾಂಶುಪಾಲರುಗಳನ್ನು ಮಾನ್ಯ ಕುಲಸಚಿವರು ಸಿಂಡಿಕೇಟು ಸಭೆಗೆ ಸ್ವಾಗತಿಸಿದರು.
    1. ಶ್ರೀ ಚಂದ್ರಶೇಖರ ದೀಕ್ಷಿತ್ ಹೆಚ್. ಪ್ರಾಂಶುಪಾಲರು, ಶ್ರೀ ಮಹಾವೀರ ಕಾಲೇಜು, ಮೂಡಬಿದಿರೆ
    2. ಡಾ. ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ್, ಪ್ರಾಂಶುಪಾಲರು, ಶಾರದಾ ಕಾಲೇಜು, ಮಂಗಳೂರು

- **ಕೃತಜ್ಞತೆ**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28(1) (ಡಿ) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಪ್ರೊ. ಡಿ. ಶಿವಲಿಂಗಯ್ಯ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಸದಸ್ಯತ್ವದ ಅವಧಿಯು ದಿನಾಂಕ 01.11.2020ರಂದು ಕೊನೆಗೊಂಡಿರುವುದರಿಂದ ಸದರಿಯವರನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28 (1) (ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟು ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಈ ಕೆಳಗಿನ ಪ್ರಾಂಶುಪಾಲರುಗಳ ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಸದರಿಯವರುಗಳನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿರುತ್ತದೆ.

    1. ಡಾ.ಮನೋಹರ್ ವಿನ್ಸೆಂಟ್ ಸೆರಾವೋ, ಪ್ರಾಂಶುಪಾಲರು, ಸಂತ ಅಲೋಶಿಯಸ್ ಸಂಧ್ಯಾ ಕಾಲೇಜು, ಮಂಗಳೂರು
    2. ಪ್ರೊ. ಶ್ರೀವರ್ಮ ಅಜ್ರಿ ಎಂ. ಪ್ರಾಂಶುಪಾಲರು, ಮಂಜುನಾಥ ಪೈ ಮೆಮೋರಿಯಲ್ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ಕಳ

ಇವರೆಲ್ಲರೂ ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಸಿಂಡಿಕೇಟು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## I. ನಡವಳಿಗಳ ದೃಢೀಕರಣ

ದಿನಾಂಕ 28.10.2020 ರಂದು ನಡೆದ 2020ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.
ದಿನಾಂಕ 28.10.2020ರಂದು ನಡೆದ 2020ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಡವಳಿಯಯನ್ನು ಈ ಕೆಳಗಿನ ತಿದ್ದುಪಡಿಗಳನ್ನು ಮಾಡಿ ದೃಢೀಕರಿಸಲಾಯಿತು.

1. ಇತರ ವಿಷಯಗಳಲ್ಲಿ ತೆಗೆದುಕೊಂಡಿರುವ ನಿರ್ಣಯದ ಕ್ರಮ ಸಂಖ್ಯೆ 3 ಕ್ಕೆ ಸಂಬಂಧಿಸಿ ರಾಜ್ಯಪಾಲರ ಕಚೇರಿಯಿಂದ ಸ್ವೀಕೃತಿಯಾದ ಸುತ್ತೋಲೆ ಪತ್ರ ದಿನಾಂಕ 26.04.2016 ಎಂದು ನಮೂದಿಸಲಾಯಿತು.

2. ಇತರ ವಿಷಯಗಳಲ್ಲಿ ತೆಗೆದುಕೊಂಡ ನಿರ್ಣಯದ ಕ್ರಮ ಸಂಖ್ಯೆ 5 ರಲ್ಲಿ ಪರಿಷ್ಕರಿಸಲಾದ ಪರೀಕ್ಷಾ ಸಂಭಾವನೆಯನ್ನು ಕೋವಿಡ್–19ರ ಹಿನ್ನೆಲೆಯಲ್ಲಿ ಸಪ್ಟೆಂಬರ್ / ಅಕ್ಟೋಬರ್

2020ನೇ ಸಾಲಿಗೆ ನಡೆದ ಪರೀಕ್ಷಾ ಕಾರ್ಯಗಳಿಗೆ ಮಾತ್ರ ಅನ್ವಯಿಸುವಂತೆ ಪರಿಷ್ಕರಿಸಲು ನಿರ್ಣಯಿಸಲಾಯಿತು.

3. ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರ ನೇಮಕಾತಿಗೆ ಅನುಸರಿಸುವ ಮಾನದಂಡದ ಕುರಿತಂತೆ ಸುಮಾರು 25 ನಿಮಿಷಗಳ ಚರ್ಚೆ ನಡೆದಿರುತ್ತದೆ. ಈ ಚರ್ಚೆಯಲ್ಲಿ ಹಾಜರಿದ್ದ ಎಲ್ಲಾ 17 ಸಿಂಡಿಕೇಟು ಸದಸ್ಯರುಗಳು ಭಾಗವಹಿಸಿದ್ದರು ಎಂಬುದಾಗಿ ಸರಿಪಡಿಸಲು ನಿರ್ಣಯಿಸಲಾಯಿತು.

II. ದಿನಾಂಕ 09.10.2020ರಂದು ನಡೆದ **ಸಿಂಡಿಕೇಟಿನ 2020ನೇ ಸಾಲಿನ ಐದನೇ ಸಾಮಾನ್ಯ ಸಭೆಯ** ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.
ಅನುಮೋದಿಸಲಾಯಿತು.

III. **ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.7:01(2020)
**ವಿಷಯ:** ಡಾ.ಶಾಮಪ್ರಸಾದ್, ವಿ.ಆರ್. ಇವರಿಗೆ, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡುವ ಬಗ್ಗೆ.
**ನಿರ್ಣಯ:** ಸದರಿಯವರನ್ನು ಸಂಶೋಧನಾ ಮಾರ್ಗದರ್ಶಕರಾಗಿ ಷರತ್ತು ರಹಿತವಾಗಿ ಮಾನ್ಯತೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.7:02(2020)
**ವಿಷಯ:** ಪಿ.ಹೆಚ್.ಡಿ ಹಾಗೂ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಶುಲ್ಕಗಳ ಬಗ್ಗೆ.
**ನಿರ್ಣಯ:** ಬೋಧನಾ ಶುಲ್ಕವನ್ನು ಹೊರತುಪಡಿಸಿ ಉಳಿದಂತೆ ಭಾರತೀಯ ವಿದ್ಯಾರ್ಥಿಗಳಿಗೆ ನಿಗದಿ ಪಡಿಸಿರುವ ಎಲ್ಲಾ ಶುಲ್ಕಗಳನ್ನು ಪಿ.ಹೆಚ್.ಡಿ ಹಾಗೂ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ನಿಗದಿಪಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ.7.03(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಜಾಗದಲ್ಲಿ ಅನಧಿಕೃತವಾಗಿ ಹೈ ಟೆನ್ಷನ್ ಪವರ್ ಲೈನ್ ಎಳೆದಿರುವ ಬಗ್ಗೆ ಮೆಸ್ಕಾಂ ಇವರ ವಿರುದ್ಧ ನಷ್ಟ ಪರಿಹಾರ ಕೋರಿ ಮೊಕದ್ದಮೆ ಹೂಡುವ ಬಗ್ಗೆ.

**ನಿರ್ಣಯ:** ಲಭ್ಯವಿರುವ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ.7.04(2020)
**ವಿಷಯ:** ಶ್ರೀ.ಗೋಪಿಚಂದ್ ಪೊವರ್, ಮಲ್ಲೇಶ್ವರಂ, ಬೆಂಗಳೂರು ಇವರ ವಿರುದ್ಧ ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ಎಲ್ಲಿ ಸಿವಿಲ್ ಸೂಟ್ ಹೂಡುವ ಬಗ್ಗೆ
**ನಿರ್ಣಯ:** ಠೇವಣಿ ಮೊತ್ತದ ಮರುಪಾವತಿಗಾಗಿ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಲು ಜೊತೆಗೆ ಈ ವಿಷಯದಲ್ಲಿ ಅಗತ್ಯವಿದ್ದಲ್ಲಿ ರಾಜಿ ಸಂಧಾನ ನಡೆಸಲು ಸಿಂಡಿಕೇಟು

ಸದಸ್ಯರಾದ ಶ್ರೀ ರವೀಂದ್ರನಾಥ ರೈ ಅವರಿಗೆ ತಿಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.7.05(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯನ್ನು ಪುನರ್‌ರಚಿಸಿದ ಬಗ್ಗೆ
**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.7:06(2020)
**ವಿಷಯ:** ಉಡುಪಿ ಜಿಲ್ಲೆಯ ಬೆಳಪುವಿನಲ್ಲಿ ಅತ್ಯಾಧುನಿಕ ಸಂಶೋಧನಾ ಕೇಂದ್ರ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಆವರಣದಲ್ಲಿ ವಿವಿಧ ಕಟ್ಟಡಗಳ ಕಾಮಗಾರಿ: ಬೆಳಪುವಿನಲ್ಲಿರುವ ಕಟ್ಟಡ ಕಾಮಗಾರಿಗೆ ಎರಡನೇ ಹಂತದ ಕೇವಣಿ ಅನುದಾನವನ್ನು ಕರ್ನಾಟಕ ಗೃಹ ಮಂಡಳಿಗೆ ಬಿಡುಗಡೆ ಮಾಡುವ ಬಗ್ಗೆ
**ನಿರ್ಣಯ:** ಕಾರ್ಯಕಾರಿ ಅಭಿಯಂತರರ ಶಿಫಾರಸ್ಸನ್ನು ಪರಿಗಣಿಸಿಕೊಂಡು ರೂ.5.00 ಕೋಟಿ ಠೇವಣಿಯನ್ನು ಬಿಡುಗಡೆಗೊಳಿಸಲು ನಿರ್ಣಯಿಸಲಾಯಿತು. ಮುಂದುವರಿದು, ಸದರಿ ಕಾಮಗಾರಿಯ ಬಗ್ಗೆ ಕರ್ನಾಟಕ ಗೃಹ ಮಂಡಳಿ ಮತ್ತು ವಿಶ್ವವಿದ್ಯಾನಿಲಯದ ಜೊತೆಗಿನ ಕರಾರು ಪತ್ರದ ಬಗ್ಗೆ ವಿವರಣೆಯನ್ನು ಮುಂಬರುವ ಸಿಂಡಿಕೇಟು ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿಎಂಇಬಿ ಸಾ.ಸ.7:07(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ Computer Centre ಹಾಗೂ Mass Communication and Journalism (MCJ) ವಿಭಾಗಕ್ಕೆ ಬೇಕಾಗಿರುವ ಉಪಕರಣಗಳನ್ನು ರೂಸಾ ಅನುದಾನದಿಂದ ಖರೀದಿಸುವ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ಪ್ರಸ್ತಾವಿತ ಉಪಕರಣದ ಬಳಕೆಯ ಅವಶ್ಯಕತೆ ಮತ್ತು ಫಲಿತಾಂಶದ ಮಾಹಿತಿಯ ನಿರ್ವಹಣೆ ಮಾಡಿಕೊಳ್ಳುವ ಷರತ್ತಿನೊಂದಿಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.7:08(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ನ್ಯೂಸ್‌ಲೆಟರ್ ಮುದ್ರಿಸುವ ಕುರಿತು.
**ನಿರ್ಣಯ:** ದಿನಾಂಕ 21.10.2020 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.7:09(2020)
**ವಿಷಯ:** ಸಮಾಜ ಕಾರ್ಯವಿಭಾಗದ ಬೋಧಕ ಸಿಬ್ಬಂದಿಗಳ ದೂರಿನ ಬಗ್ಗೆ.
**ನಿರ್ಣಯ:** ಸದರಿ ಬೋಧಕ ಸಿಬ್ಬಂದಿಗಳ ದೂರು ಪ್ರತಿದೂರುಗಳನ್ನು ಸಿಂಡಿಕೇಟು ಸಭೆಯು ಗಂಭೀರವಾಗಿ ಪರಿಗಣಿಸಿ, ಸಿಂಡಿಕೇಟು ಸದಸ್ಯರುಗಳಾದ ಡಾ.ಎಮ್.ಎಸ್.ತಳವಾರ, ಕಾನೂನು ಪರಿಣತರಾದ ಶ್ರೀ ವಿವೇಕಾನಂದ ಪಣಿಯಾಲ ಮತ್ತು ಕುಲಸಚಿವರನ್ನೊಳಗೊಂಡ ಸಮಿತಿಯು ಮಾಹಿತಿಯನ್ನು ಪುನರ್ ವಿಮರ್ಶಿಸಿ ತಮ್ಮ ಶಿಫಾರಸ್ಸನ್ನು ಮುಂದಿನ ಸಿಂಡಿಕೇಟು ಸಭೆಗೆ ಮರುಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.7:10(2020)

**ವಿಷಯ:** ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನಾ ವಿದ್ಯಾರ್ಥಿನಿಯ ದೂರಿನ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದಲ್ಲಿ ರಚಿಸಲಾಗಿರುವ ICCಗೆ ಸದರಿ ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.7:11(2020)

**ವಿಷಯ:** ಡಾ. ಉಮೇಶ ನಾಯ್ಕ, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ವಿರುದ್ಧ ವಿಭಾಗದ ವಿದ್ಯಾರ್ಥಿನಿಯರು ನೀಡಿರುವ ದೂರಿನ ಬಗ್ಗೆ.

**ನಿರ್ಣಯ:** ಪ್ರಕರಣದ ಕುರಿತು ಗೌರವಾನ್ವಿತ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ (Divisional Bench) ತಕ್ಷಣವೇ ಮೇಲ್ಮನವಿ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.7:12(2020)

**ವಿಷಯ:** ಶ್ರೀ. ರವಿಚಂದ್ರ ಪಿ.ಎಂ. ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

**ಕ್ರಮ ಸಂಖ್ಯೆ: 1** ಮಂಗಳೂರು ವಿಶ್ವವಿದ್ಯಾನಿಲಯ, ಆಂಗ್ಲ ಭಾಷೆಯಲ್ಲಿ MANGALORE UNIVERSITY ಎಂದಿದ್ದು, ಇದನ್ನು "MANGALURU UNIVERSITY" ಎಂದು ಬದಲಾವಣೆ ಮಾಡುವ ಬಗ್ಗೆ

**ನಿರ್ಣಯ:** ವಿಶ್ವವಿದ್ಯಾನಿಲಯದ ಹೆಸರು ಬದಲಾವಣೆಗೆ ಅವಕಾಶವಿಲ್ಲದಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡಲಾಯಿತು.

**ಕ್ರಮ ಸಂಖ್ಯೆ: 2** ಮಂಗಳೂರು ವಿಶ್ವವಿದ್ಯಾನಿಲಯದ ಆರ್ಥಿಕ ಸ್ಥಿತಿಗತಿಯ ವಿವರ ಸಭೆಯ ಮುಂದಿಡಲು ಕೋರಿ

**ನಿರ್ಣಯ:** ಈ ಬಗ್ಗೆ ಮುಂದಿನ ಸಿಂಡಿಕೇಟು ಸಭೆಗೆ ವಿವರಗಳನ್ನು ಸಲ್ಲಿಸುವುದಾಗಿ ಹಣಕಾಸು ಅಧಿಕಾರಿಗಳು ತಿಳಿಸಿದರು.

**ಕ್ರಮ ಸಂಖ್ಯೆ: 3** ಬಿ.ಪಿ.ಎಡ್. ಕೋರ್ಸ್ ಬಗೆಗಿನ ಗೊಂದಲ ಪರಿಹರಿಸಿ ಕೋರ್ಸ್ ಶಾಶ್ವತವಾಗಿ ಮುಂದುವರಿಯುವಂತೆ ಕ್ರಮ ಕೈಗೊಳ್ಳಲು ಚರ್ಚೆ, (ಈ ಬಗ್ಗೆ ಈಗಾಗಲೇ ರಚಿಸಲಾದ ಸಮಿತಿ 02.11.2020ರ ಒಳಗೆ ಸಭೆ ನಡೆಸಿ ಇದಕ್ಕೆ ಪೂರಕ ಕ್ರಮ ಕೈಗೊಳ್ಳಬೇಕು.)

**ನಿರ್ಣಯ:** ಸದರಿ ಪ್ರಸ್ತಾವನೆಗೆ ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್ ಸಾ.ಸ.7:14(2020) ರಲ್ಲಿ ನಿರ್ಣಯಿಸಲಾಗುವುದು.

**ಕ್ರಮ ಸಂಖ್ಯೆ: 4** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಮಹತ್ವದ (ಉದಾ: NSS/CDC)

ಜವಾಬ್ದಾರಿಗಳ ಪಟ್ಟಿ, ಇದನ್ನು ಯಾರು ನಿರ್ವಹಿಸುತ್ತಿದ್ದಾರೆ? ಅವರ ವಿವರ, ಅವರ ಕಾಲಾವಧಿ ಎಲ್ಲಿಯವರೆಗೆ ಇದೆ?

**ನಿರ್ಣಯ:** ಈ ಬಗ್ಗೆ ವಿಸ್ತೃತವಾದ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

**ಕ್ರಮ ಸಂಖ್ಯೆ: 5** ಕುಲಪತಿ, ಕುಲಸಚಿವ, ಕುಲಸಚಿವ (ಪರೀಕ್ಷಾಂಗ) ಇವರ ಕಾರ್ಯಾಲಯದ ಕೆಲಸವನ್ನು ಇನ್ನಷ್ಟು ಉತ್ತಮ ಪಡಿಸಲು ಕೈಗೊಳ್ಳಬೇಕಾದ ವಿಷಯದ ಬಗ್ಗೆ ಚರ್ಚೆ, ವಿಶೇಷಾಧಿಕಾರಿ ನೇಮಕ ಈ ಹಿಂದೆ (25.09.2020)ರಂದು ಸಿಬ್ಬಂದಿ ಸಾ.ಸ.4:34(2020) ಪುಟ ಸಂಖ್ಯೆ 46 ರಲ್ಲಿ ಚರ್ಚಿಸಲಾಗಿದೆ.

**ನಿರ್ಣಯ:** ಅಗತ್ಯತೆಯ ಮೇರೆಗೆ ಸಿಬ್ಬಂದಿಗಳನ್ನು ಬಳಸಿಕೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಕ್ರಮ ಸಂಖ್ಯೆ: 6** ವಿಶ್ವವಿದ್ಯಾನಿಲಯದ ಆಡಳಿತದ ಅನುಮತಿ ಪಡೆಯದೆ ವಿಶ್ವವಿದ್ಯಾನಿಲಯದ ಪ್ರೊಫೆಸರುಗಳು ವಿದೇಶದೊಂದಿಗೆ ನೇರವಾಗಿ ಪತ್ರ ವ್ಯವಹಾರ ನಡೆಸಲು ಅವಕಾಶ ಇದೆಯೇ? ಕಳೆದ 4 ವರ್ಷಗಳಲ್ಲಿ ಈ ರೀತಿ ಅನುಮತಿ ಪಡೆದು ಯಾವುದಾದರು ಪತ್ರ ವ್ಯವಹಾರ ನಡೆಸಿದ ಬಗ್ಗೆ ವಿವರ ಇದ್ದಲ್ಲಿ ತಿಳಿಸುವುದು.

**ನಿರ್ಣಯ:** ವಿಶ್ವವಿದ್ಯಾನಿಲಯದ ಯಾವುದೇ ಸಿಬ್ಬಂದಿಗಳ ಪತ್ರ ವ್ಯವಹಾರಗಳು ವಿಶ್ವವಿದ್ಯಾನಿಲಯದ ಸಂಬಂಧಿತ ಅಧಿಕಾರಿಗಳ ಮೂಲಕವೇ ನಡೆಸಬೇಕಾಗಿರುತ್ತದೆ.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.7:13(2020)

**ವಿಷಯ:** ಶ್ರೀ. ರವಿಚಂದ್ರ ಪಿ.ಎಂ. ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು – ಡಾ. ಪಿ. ದಯಾನಂದ ಪೈ–ಪಿ. ಸತೀಶ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ರಥಬೀದಿ ಇಲ್ಲಿಗೆ 2020–21ರ ಸಾಲಿಗೆ ಎಂ.ಕಾಂ. ಕೋರ್ಸಿಗೆ ಪ್ರವೇಶ ಮಿತಿಯನ್ನು 50 ರಿಂದ 70ಕ್ಕೆ ಏರಿಸಲು ಹಾಗೂ ಎಂ.ಎಸ್.ಡಬ್ಲ್ಯೂ ಕೋರ್ಸಿಗೆ ಪ್ರವೇಶಮಿತಿಯನ್ನು 30ಕ್ಕೆ ನಿಗದಿಗೊಳಿಸುವ ಬಗ್ಗೆ

**ನಿರ್ಣಯ:** ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಡಾ. ಪಿ. ದಯಾನಂದ ಪೈ–ಪಿ. ಸತೀಶ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ರಥಬೀದಿ ಇಲ್ಲಿಗೆ ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಎಂ.ಕಾಂ. ಕಾರ್ಯಕ್ರಮಕ್ಕೆ 70 ವಿದ್ಯಾರ್ಥಿ ಪರಿಮಿತಿ ಮತ್ತು ಎಂ.ಎಸ್.ಡಬ್ಲ್ಯೂ ಕಾರ್ಯಕ್ರಮಕ್ಕೆ 30 ವಿದ್ಯಾರ್ಥಿ ಪರಿಮಿತಿಯನ್ನು ನಿಗದಿಪಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

ಡಾ. ಜಿ. ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಅಜ್ಜರಕಾಡು, ಉಡುಪಿ ಇಲ್ಲಿನ ಸ್ನಾತಕೋತ್ತರ ರಸಾಯನಶಾಸ್ತ್ರ ಕಾರ್ಯಕ್ರಮಕ್ಕೆ 30 ವಿದ್ಯಾರ್ಥಿ ಪರಿಮಿತಿಯನ್ನು ನಿಗಡಿಪಡಿಸಲು ಸೂಕ್ತ ಕ್ರಮಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.7:14(2020)

**ವಿಷಯ:** ಶ್ರೀ. ರಮೇಶ ಕೆ. ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ಮತ್ತು ಕ್ರೀಡಾ

ಅಧ್ಯಯನ ವಿಭಾಗದಿಂದ ನಡೆಸಲ್ಪಡುತ್ತಿರುವ ಬಿ.ಪಿ.ಎಡ್. ಕಾರ್ಯಕ್ರಮದ ಮಾನ್ಯತೆ ಬಗ್ಗೆ ಚರ್ಚಿಸಲು ವಿಭಾಗದ ಅಧ್ಯಕ್ಷರಾದ ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ ಇವರನ್ನು ಸಭೆಗೆ ಆಹ್ವಾನಿಸಲಾಯಿತು. ಸದರಿಯವರು ಬಿ.ಪಿ.ಎಡ್ ಕಾರ್ಯಕ್ರಮವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಿದ ನಂತರ ಈ ವರೆಗಿನ ಬೆಳವಣಿಗೆಗೆ ಬಗ್ಗೆ ವಿಸ್ತೃತವಾಗಿ ಸಭೆಗೆ ವಿವರಗಳನ್ನು ನೀಡಿದರು. ಕೊನೆಗೆ, ಕಳೆದ ಎರಡು ವರ್ಷಗಳಿಂದ ಬಿ.ಪಿ.ಎಡ್. ಕಾರ್ಯಕ್ರಮದ ಮಾನ್ಯತೆ ಬಗ್ಗೆ NCTE ನಿಂದ ಅನುಮೋದನೆ ದೊರಕದಿರುವ ವಿಷಯವನ್ನು ಸಿಂಡಿಕೇಟು ಗಂಭೀರವಾಗಿ ಪರಿಗಣಿಸಿತು. ಈ ಬಗ್ಗೆ ಸದರಿ ವಿಭಾಗದ ಅಧ್ಯಕ್ಷರಿಂದ ಕೂಲಂಕುಷವಾದ ವಿವರಣೆ ಪಡೆದು NCTE ಬೆಂಗಳೂರು ಕಚೇರಿಗೆ ಶೀಘ್ರವಾಗಿ ವಿಶ್ವವಿದ್ಯಾನಿಲಯದ ಕ್ರೀಡಾ ಚಟುವಟಿಕೆಗಳ ಸಾಧನೆಗಳನ್ನು ಕ್ರೋಢೀಕರಿಸಿ ಪತ್ರ ಬರೆಯಲು ತಿಳಿಸಲಾಯಿತು. ಬಿ.ಪಿ.ಎಡ್. ಕಾರ್ಯಕ್ರಮಕ್ಕೆ ಈತನಕ NCTE ಮಾನ್ಯತೆ ದೊರಕದಿರುವ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಸದರಿ ಕಾರ್ಯಕ್ರಮವನ್ನು ನಡೆಸಲು ಆಗಿರುವ ತೊಂದರೆಗಳಿಗೆ ವಿಭಾಗದ ಸಂಬಂಧಿತರಿಗೆ ಕಾರಣ ಕೇಳಿ ನೋಟೀಸು ಜಾರಿಗೊಳಿಸಲು ನಿರ್ಣಯಿಸಲಾಯಿತು.

NCTE ಯಿಂದ ಮಂಗಳೂರು ವಿಶ್ವವಿದ್ಯಾನಿಲಯದ ಬಿ.ಪಿ.ಎಡ್ ಕಾರ್ಯಕ್ರಮಕ್ಕೆ ಮಾನ್ಯತೆ ದೊರೆಯುವ ನಿರೀಕ್ಷೆಯ ಮೇರೆಗೆ ಸದರಿ ಕಾರ್ಯಕ್ರಮವನ್ನು ಶೈಕ್ಷಣಿಕ ವರ್ಷ 2020–21ನೇ ಸಾಲಿನಿಂದ ಪುನಃ ಪ್ರಾರಂಭಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.7:15(2020)

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು

**ನಿರ್ಣಯ:**

**ಪ್ರಸ್ತಾವನೆ ಸಂ. 1 ಮತ್ತು ಸಂ. 2** ಘಟಕ ಕಾಲೇಜುಗಳ ಶಿಕ್ಷಕರ ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ರೋಸ್ಟರ್ ಮಾಹಿತಿಯೊಂದಿಗೆ ತಯಾರಿಸಲು ಸಮಿತಿ ರಚಿಸಲಾಗಿದ್ದು ಈ ಸಮಿತಿ ಸಭೆಯಲ್ಲಿಯೇ ಪ್ರಭಾರ ಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿದ ಮಾನದಂಡದ ನಿಯಮವನ್ನು ರೂಪಿಸಬೇಕಾಗಿ ತಿಳಿಸಲಾಯಿತು.

**ಪ್ರಸ್ತಾವನೆ ಸಂ.3** ಕರ್ನಾಟಕ ಸರಕಾರದ ಮಾರ್ಗಸೂಚಿಯನ್ನು ಅನುಸರಿಸಿಕೊಂಡು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಅಭಿವೃದ್ಧಿ ಸಮಿತಿ ರಚಿಸಲು ಮುಂದಿನ ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:16(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಕಾನೂನು ಅಭಿಪ್ರಾಯದಂತೆ ಮುಂದುವರಿಸುವ ಬಗ್ಗೆ. ಘಟಕ ಕಾಲೇಜಿನಿಂದ ಸ್ನಾತಕೋತ್ತರ ವಿಭಾಗದಲ್ಲಿ ನಿಯೋಜನೆ ಮೇರೆಗೆ ಸೇವೆ ಸಲ್ಲಿಸಿದ ಅವಧಿಯಲ್ಲಿ ಕಾಲೇಜಿನಲ್ಲಿ ಸಾಧಿಸಬೇಕಾದ ವೇತನ ಪಾವತಿಸುವ ಬಗ್ಗೆ.

**ನಿರ್ಣಯ:** ತಾತ್ಕಲಿಕ / ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಮುಂದಿನ ಆರು ತಿಂಗಳಿಗೆ ಮುಂದುವರಿಸಲು ನಿರ್ಣಯಿಸಲಾಯಿತು. ಈ ಸಿಬ್ಬಂದಿಗಳಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಉಡುಪಿ, ದಕ್ಷಿಣ ಕನ್ನಡ, ಕೊಡುಗು ಜಿಲ್ಲೆಗಳ ಸಿಬ್ಬಂದಿಗಳ ವಿವರ ಮತ್ತು ಹೊರ ಜಿಲ್ಲೆಗಳ ಸಿಬ್ಬಂದಿಗಳನ್ನು

ಗುರುತಿಸಲು ನಿರ್ಣಯಿಸಲಾಯಿತು. ಮುಂದಿನ ದಿನಗಳಲ್ಲಿ ತಾತ್ಕಲಿಕ / ಹೊರಗುತ್ತಿಗೆ ನೆಲೆಯಲ್ಲಿ ಸಿಬ್ಬಂದಿಗಳನ್ನು ಆಯ್ಕೆ ಮಾಡುವಾಗ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ಥಳೀಯ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:17(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕಾನೂನು ಸಲಹೆ ನೀಡಿದ ನ್ಯಾಯವಾದಿಗೆ ಶುಲ್ಕ ಪಾವತಿಸುವ ಬಗ್ಗೆ.

**ನಿರ್ಣಯ:** ಸದರಿಯವರ ಬಿಲ್ಲು ಮೊತ್ತವನ್ನು ಪಾವತಿಸಲು ನಿರ್ಣಯಿಸಲಾಯಿತು ಮತ್ತು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಸದರಿಯರವನ್ನು ಸೇರಿಸಲು ಸೂಕ್ತ ಕ್ರಮಕೈಗೊಳ್ಳಬಹುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:18(2020)

**ವಿಷಯ:** ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ಎಂ.ಎ ಕನ್ನಡ ಸ್ನಾತಕೋತ್ತರ ಪದವಿಯ ದಿನಾಂಕ 25.09.2020ರ ಪತ್ರಿಕೆ **'KNH553:ಕನ್ನಡ ಮತ್ತು ಕಂಪ್ಯೂಟರ್ ಬಳಕೆ ಪರೀಕ್ಷೆ'** ನಡೆಯದಿರುವ ಬಗ್ಗೆ ಆಂತರಿಕ ವಿಚಾರಣಾ ಸಮಿತಿಯು ವಿಚಾರಣೆ ನಡೆಸಿ ಸಲ್ಲಿಸಿದ ವರದಿಯ ಬಗ್ಗೆ.

**ನಿರ್ಣಯ:** ಆಂತರಿಕ ವಿಚಾರಣಾ ಸಮಿತಿಯ ವರದಿಯನ್ನು ಅಂಗೀಕರಿಸಿ, ಸುದೀರ್ಘ ಚರ್ಚೆಯ ನಂತರ ಸದರಿ ವಿಭಾಗದ ಮುಖ್ಯಸ್ಥರು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿರುವುದರಿಂದ **KNH553:ಕನ್ನಡ ಮತ್ತು ಕಂಪ್ಯೂಟರ್ ಬಳಕೆ ಪರೀಕ್ಷೆ'** ಪತ್ರಿಕೆಯ ಮರು ಪರೀಕ್ಷಾ ಕಾರ್ಯಕ್ಕೆ ತಗಲಿದ ಖರ್ಚು ವೆಚ್ಚವನ್ನು ಸಂಬಂಧಪಟ್ಟ ಮುಖ್ಯಸ್ಥರಿಂದ ವಸೂಲಾತಿ ಮಾಡುವಂತೆ, ಸೂಕ್ತ ದಂಡ ಶುಲ್ಕವನ್ನು ನಿಗದಿ ಪಡಿಸುವ ಅಧಿಕಾರವನ್ನು ಕುಲಪತಿಗಳಿಗೆ ನೀಡಲಾಯಿತು. ಇನ್ನು ಮುಂದೆ ಈ ರೀತಿ ನಿರ್ಲಕ್ಷ / ಕರ್ತವ್ಯ ಚ್ಯುತಿ ಮರುಕಳಿಸಬಾರದೆಂಬ ಸದುದ್ಧೇಶದಿಂದ ತಪ್ಪಿತಸ್ಥ ಅಧಿಕಾರಿಗೆ ಲಿಖಿತ ದಂಡನಾ ಶಿಕ್ಷೆಯನ್ನು ವಿಧಿಸುವಂತೆ ಮತ್ತು ಒಂದು ಶೈಕ್ಷಣಿಕ ವರ್ಷದ ಪರೀಕ್ಷೆ ನಡೆಸುವ ಜವಾಬ್ದಾರಿಯಿಂದ ಸದರಿಯವರನ್ನು ಆಡಳಿತಾತ್ಮಕವಾಗಿ ಮುಕ್ತರನ್ನಾಗಿಸಲು ಸಿಂಡಿಕೇಟು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ.7:19(2020)

**ವಿಷಯ:** M/S Total IT Solutions Bangalore ಇವರಿಂದ ಖರೀದಿಸಿರುವ ಡೆಸ್ಕ್‌ಟಾಪ್ ಮತ್ತು ಲ್ಯಾಪ್‌ಟಾಪ್‌ಗಳ ನಿರ್ವಹಣೆ/ದುರಸ್ಥಿ/ಬದಲಿ ವ್ಯವಸ್ಥೆಗೆ ಸಂಬಂಧಿಸಿದಂತೆ ಆರ್ಬಿಟ್ರೇಶನ್ (arbitration)ಗೆ ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದ ಹಿತಾಶಕ್ತಿಯನ್ನು ಗಮನದಲ್ಲಿಟ್ಟು ಈ ಬಗ್ಗೆ ಸೂಕ್ತವಾದ ಎಲ್ಲಾ ರೀತಿಯ ಕಾನೂನು ಕ್ರಮಕೈಗೊಳ್ಳಲು ಕುಲಪತಿಯವರಿಗೆ ಅಧಿಕಾರವನ್ನು ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.7:20(2020)

**ವಿಷಯ:** ಆಡಳಿತ ಸೌಧ ಕಟ್ಟಡದಲ್ಲಿರುವ ಕಚೇರಿಯ ಶೈಕ್ಷಣಿಕ ವಿಭಾಗಕ್ಕೆ ಡುಪ್ಲೋ ಯಂತ್ರ ಖರೀದಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಸಿಂಡಿಕೇಟು ಸದಸ್ಯರಾದ ಶ್ರೀ ರವೀಂದ್ರನಾಥ ರೈ ಇವರು ವಿಶ್ವವಿದ್ಯಾನಿಲಯದಲ್ಲಿ ಅವಶ್ಯಕತೆಗಳಿಗನುಗುಣವಾಗಿ ಈಗಾಗಲೇ ಕೈಗೆತ್ತಿಕೊಂಡ ಎರಡು ಯೋಜನೆಗಳಾದ 1. ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಎಚ್‌ಆರ್‌ಎಂ.ಎಸ್ ಅಟೋಮೇಷನ್, admission ಅಟೋಮೇಷನ್ ಮತ್ತು ಪರೀಕ್ಷಾ ವ್ಯವಸ್ಥೆಯ ಆಟೋಮೇಷನ್) ಮತ್ತು ಡೇಟಾ ಸೆಂಟರ್ ಸ್ಥಾಪನೆಯ ಮೂಲಸೌಕರ್ಯಗಳ ಅನುಷ್ಠಾನಗಳಿಗೆ ಸಂಬಂಧಿಸಿದ ಇತರೆ ಪರಿಕರಗಳ ಬಾಕಿಯಿರುವ ಮೊತ್ತದ ಪಾವತಿ ಮತ್ತು ಕರಾರುಗಳ ಬಗ್ಗೆ ಸಿಂಡಿಕೇಟಿನ ಪರಿಗಣನೆಗೆ ಮಂಡಿಸಿದರು.

ಮಾನ್ಯ ಕುಲಪತಿಯವರು ಸದರಿ ಯೋಜನೆಗಳನ್ನು ವಿಶ್ವವಿದ್ಯಾನಿಲಯದಲ್ಲಿ ಕೈಗೆತ್ತಿಕೊಂಡಿರುವ ಸಂದರ್ಭೋಚಿತ ಹಿನ್ನೆಲೆಯನ್ನು ವಿವರಿಸುತ್ತಾ ಹಿಂದಿನ ಸಿಂಡಿಕೇಟು ಸಭೆಯ ನಿರ್ಣಯದ ಮೇಲೆ ಸಭೆಯ ಗಮನವನ್ನು ಸೆಳೆದರು.

ಮುಂದುವರಿದು, ವಿಶ್ವವಿದ್ಯಾನಿಲಯದ ಒಟ್ಟು ಅಭಿವೃದ್ಧಿಯ ಹಿತದೃಷ್ಟಿಯಿಂದ ಪ್ರಾಸ್ತಾವಿತ ಯೋಜನೆಗಳ ಬಗ್ಗೆ ಕುಲಸಚಿವರು ವಿವರಿಸಿದರು. ಈ ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ ಕುಲಸಚಿವರು ತಮ್ಮ ಭಿನ್ನಾಭಿಪ್ರಾಯವನ್ನು ಮಂಡಿಸಿ, ಆಕ್ಷೇಪಣೆಯನ್ನು ನಡವಳಿಯಲ್ಲಿ ದಾಖಲಿಸಲು ವಿನಂತಿಸಿದರು. ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ, Keonics ಸಂಸ್ಥೆಗೆ ಗುತ್ತಿಗೆ ನೀಡಿದ ವಿಧಾನ, ಅಗತ್ಯವಿಲ್ಲದಿದ್ದರೂ ಎಚ್‌ಆರ್‌ಎಂ.ಎಸ್ ತಂತ್ರಾಂಶವನ್ನು ಪಡೆಯುವ ಬಗ್ಗೆ ಮಾಡಿಕೊಂಡ ಒಪ್ಪಂದ, ಕಾರ್ಯಾದೇಶ ನೀಡಿದ ರೀತಿ ಕೆಟಿಪಿಪಿ ಕಾಯ್ದೆ 1999ಕ್ಕೆ ವಿರುದ್ಧವಾಗಿರುವುದಾಗಿ ಕುಲಸಚಿವರು ಅಭಿಪ್ರಾಯಪಟ್ಟರು. ಈ ಅಭಿಪ್ರಾಯವನ್ನು ನಡವಳಿಯಲ್ಲಿ ದಾಖಲಿಸಲು ನಿರ್ಣಯಿಸಲಾಯಿತು.

ಸಭೆಯು ಕುಲಪತಿಯವರು ಮತ್ತು ಕುಲಸಚಿವರು ಮಂಡಿಸಿದ ವಿವರಗಳನ್ನು ಪರಿಗಣಿಸಿ, ಪ್ರಾಸ್ತಾವಿತ ಯೋಜನೆಗಳ ಸಂಗ್ರಹಣೆ, ಕಾನೂನಾತ್ಮಕ ಒಪ್ಪಂದ, ಕಾರ್ಯವಿಧಾನ ಮತ್ತು ಆರ್ಥಿಕ ದೃಷ್ಟಿಕೋನದಿಂದ ವ್ಯಾಪಕವಾಗಿ ಚರ್ಚಿಸಿತು.

ಎರಡೂ ಯೋಜನೆಗಳು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ವಿಶ್ವವಿದ್ಯಾನಿಲಯದ ದಕ್ಷ ಆಡಳಿತದ ಅಗತ್ಯತೆಯ ದೃಷ್ಟಿಕೋನದಿಂದ ಹಾಗೂ ವಿಶೇಷವಾಗಿ ಪ್ರವೇಶಾತಿ ದಾಖಲಾತಿಯ ಯಾಂತ್ರೀಕರಣದ ಮೂಲ ದತ್ತಾಂಶವನ್ನು ಸಂಗ್ರಹಿಸಿಡುವ ಯೋಜನೆಯಾಗಿರುವುದನ್ನು ಸಭೆಯು ಪರಿಗಣಿಸಿತು.

ಪ್ರಸ್ತುತ, ಕ್ಯಾಂಪಸ್ ಮ್ಯಾನೇಜ್‌ಮೆಂಟ್‌ನ ಸೇವೆಯನ್ನು ಈಗಾಗಲೇ ಭಾಗಶ: ಬಳಸಿಕೊಂಡಿರುವ ಕಾರಣ ಹಾಗೂ ಸಿಂಡಿಕೇಟಿನ ನಿರ್ಣಯದ ಮೇರೆಗೆ ರೂ.1,50,68,600/- ಗಳ ಮೊತ್ತವನ್ನು ಈಗಾಗಲೇ ಪಾವತಿಸಿರುವ ಕಾರಣ ಪ್ರವೇಶಾತಿ ಅಟೋಮೇಷನಿನ ಉಳಿದ ಮೊತ್ತದ ಶೇಕಡಾ 50ನ್ನು (ಪಾವತಿಯಾಗದ ಬಿಲ್ಲಿನ ಮೊತ್ತ) ಸದರಿಯವರಿಂದ ವಿಶ್ವವಿದ್ಯಾನಿಲಯಕ್ಕೆ ಆಗಬಹುದಾದ ವೆಚ್ಚ, ನಷ್ಟ ಹಾಗೂ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಕಾನೂನಿನ ಹಕ್ಕುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸುವ ಬಗ್ಗೆ indemnity bond ಅನ್ನು ಪಡೆದುಕೊಂಡು, ಪಾವತಿಸಲು ನಿರ್ಣಯಿಸಲಾಯಿತು. ಅಲ್ಲದೇ ಸಾಫ್ಟ್‌ವೇರ್‌ನ ತಾಂತ್ರಿಕ ಪರಿಣತಿ ಹಾಗೂ ಕಾರ್ಯವೈಖರಿಯನ್ನು ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಿಂದ ಪರಿಶೀಲಿಸಿ ದೃಢಪಡಿಸಿದ ಬಳಿಕವಷ್ಟೇ ಹಣಕಾಸು ವಿಭಾಗದಿಂದ ಮೊತ್ತವನ್ನು ಬಿಡುಗಡೆ ಮಾಡಲು ನಿರ್ಣಯಿಸಲಾಯಿತು.

ಅದಲ್ಲದೇ ಈಗಾಗಲೇ ಮಾಡಲಾಗಿರುವ ಎರಡು ಒಪ್ಪಂದಗಳನ್ನು ಪುನ: ಸಂಧಾನದ ಮೂಲಕ ಕಡ್ಡಾಯವಾಗಿ ವಿಶ್ವವಿದ್ಯಾನಿಲಯದ ಹಿತಾಶಕ್ತಿಯನ್ನು ಗಮನದಲ್ಲಿರಿಸಿ ಹಾಗೂ ಕಾನೂನು ಪ್ರಕಾರ ಹೊಸ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಲಾಯಿತು.

ಮೇಲಿನ ಒಪ್ಪಂದಗಳಂತೆ ಸೇವೆ ಒದಗಿಸುವ ಏಜನ್ಸಿಗಳೊಂದಿಗೆ ಸಂಧಾನ ನಡೆಸಲು ಶ್ರೀ ರವೀಂದ್ರನಾಥ ರೈ ಇವರನ್ನು ವಿಶ್ವವಿದ್ಯಾನಿಲಯದ ಪ್ರತಿನಿಧಿಯನ್ನಾಗಿ ನೇಮಕ ಮಾಡಲು ನಿರ್ಧರಿಸಲಾಯಿತು. ಮಾನ್ಯ ಕುಲಪತಿಯವರ ನಿರ್ದೇಶನದಂತೆ ಪ್ರೊ. ಕರುಣಾಕರ್ ಕೋಟೆಗಾರ್ ಅಧ್ಯಕ್ಷರಾಗಿರುವ ಸಮಿತಿಗೆ ಶ್ರೀ ರವೀಂದ್ರನಾಥ ರೈ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಮತ್ತು ಪ್ರೊ. ಕರುಣಾಕರ್ ಕೋಟೆಗಾರ್ ಇವರನ್ನು ಅಧ್ಯಕ್ಷರ ಜವಾಬ್ದಾರಿಯಿಂದ ಮುಕ್ತಗೊಳಿಸಲು ನಿರ್ಧರಿಸಲಾಯಿತು. ಆದಾಗ್ಯೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರೊ. ಕರುಣಾಕರ್ ಕೋಟೆಗಾರ್ ಇವರನ್ನು ಸಂಪನ್ಮೂಲ ವ್ಯಕ್ತಿ / ವಿಷಯ ತಜ್ಞರನ್ನಾಗಿ ಮುಂದುವರಿಸಲು ನಿರ್ಣಯಿಸಲಾಯಿತು.

ಅ) ಮೆ. ಕ್ಯಾಂಪಸ್ ಮ್ಯಾನೇಜ್‌ಮೆಂಟಿಗೆ ಒಟ್ಟು ರೂ. 1,50,68,600/– ನ್ನು ಪಾವತಿಸಿದ್ದು ಉಳಿದ ಮೊತ್ತದ ಶೇಕಡಾ 50ನ್ನು (ಪಾವತಿಯಾಗದ ಬಿಲ್ಲಿನ ಮೊತ್ತ) ಸದರಿಯವರಿಂದ ವಿಶ್ವವಿದ್ಯಾನಿಲಯಕ್ಕೆ ಆಗಬಹುದಾದ ವೆಚ್ಚ, ನಷ್ಟ ಹಾಗೂ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಕಾನೂನಿನ ಹಕ್ಕುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸುವ ಬಗ್ಗೆ indemnity bond ಅನ್ನು ಪಡೆದುಕೊಂಡು, ಪಾವತಿಸಲು ಮತ್ತು ಸಾಫ್ಟ್‌ವೇರಿನ ತಾಂತ್ರಿಕ ಪರಿಣತಿ ಹಾಗೂ ಕಾರ್ಯವೈಖರಿಯನ್ನು ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಿಂದ ಪರಿಶೀಲಿಸಿ ದೃಢಪಡಿಸಿದ ಬಳಿಕವಷ್ಟೇ ಹಣಕಾಸು ವಿಭಾಗದಿಂದ ಮೊತ್ತವನ್ನು ಬಿಡುಗಡೆ ಮಾಡಲು ನಿರ್ಣಯಿಸಲಾಯಿತು.

ಆ) ಮೆ. ನಿಹಾನ್ ಕಮ್ಯೂನಿಕೇಷನ್ಸ್ ಸಂಸ್ಥೆ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ಸರಬರಾಜು ಮಾಡಿರುವ ಸರ್ವರಿನ ಗುಣಮಟ್ಟ ಹಾಗೂ ಉಪಯುಕ್ತತೆ ಸಮಾಧಾನಕರವೆಂದು ಕಂಡು ಬಂದಲ್ಲಿ ಕಾರ್ಯವೈಖರಿಯನ್ನು ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಿಂದ ಪರಿಶೀಲಿಸಿ ದೃಢಪಡಿಸುವ ಷರತ್ತಿನೊಂದಿಗೆ ಸರ್ವರಿನ ಒಟ್ಟು ಖರೀದಿ ಮೊತ್ತದ ಶೇಕಡ 50 ರಷ್ಟನ್ನು ಬಿಡುಗಡೆ ಮಾಡಲು ನಿರ್ಧರಿಸಲಾಯಿತು.

ಇ) ಸದರಿ ಉಪಕರಣಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳು ವಿಶ್ವವಿದ್ಯಾನಿಲಯ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿಗಳನ್ನು ಕಟ್ಟುನಿಟ್ಟಾಗಿ ಕಾನೂನು ರೀತಿ ಪಾಲಿಸಿಕೊಂಡು ಸಿಂಡಿಕೇಟು ಕರೆದಾಗ ಈ ಬಗ್ಗೆ ವಿವರಣೆಯನ್ನು ನೀಡುಬೇಕಾಗಿ ನಿರ್ಣಯಿಸಲಾಯಿತು.

2. ಬಿ.ಎಡ್., ಬಿ.ಪಿ.ಎಡ್., ಎಂ.ಪಿ.ಎಡ್., ಭೂಗೋಳಶಾಸ್ತ್ರ ವಿಭಾಗಗಳಿಗೆ ಸಂಬಂಧಿಸಿ ಸಿಬ್ಬಂದಿಗಳ ಕೊರತೆಯಿದ್ದು redeployment ಮೂಲಕ ಭರ್ತಿಗೊಳಿಸಲು ಅತೀ ಶೀಘ್ರದಲ್ಲಿ ಸೂಕ್ತ ಕ್ರಮಕೈಗೊಳ್ಳುವುದಾಗಿ ಸಿಂಡಿಕೇಟು ನಿರ್ಣಯಿಸಿತು.

3. ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಜಾಗಗಳಿಗೆ ಸಂಬಂಧಿಸಿ ಅಶೋಕ್ ನಗರ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು (ಆಟದ ಮೈದಾನವಿರುವ ಜಾಗ) ಇವುಗಳು ಇತರರ ಅನಧಿಕೃತ ಬಳಕೆಯಲ್ಲಿರುವುದರ ಕುರಿತು ಈಗಾಗಲೇ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

4. ಮಾನ್ಯ ಕುಲಪತಿಯವರು ಸಭೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಕ್ರೀಡಾ ಪೋಷಕ ಪ್ರಶಸ್ತಿ ಲಭಿಸಿರುವಲ್ಲಿ ಅವಿರತವಾಗಿ ಶ್ರಮಿಸಿದ ಸ್ನಾತಕೋತ್ತರ ದೈಹಿಕ ಮತ್ತು ಕ್ರೀಡಾ ಅಧ್ಯಯನ ವಿಭಾಗದ ಶಿಕ್ಷಕ ಸಿಬ್ಬಂದಿಗಳನ್ನು ಸಭೆಯಲ್ಲಿ ಶ್ಲಾಘಿಸಿ, ಧನ್ಯವಾದಗಳನ್ನು ತಿಳಿಸಿದರು.

5. ಸಿಂಡಿಕೇಟು ಸದಸ್ಯರುಗಳು ತಾವು ಸಲ್ಲಿಸುವ ಪ್ರಸ್ತಾವನೆಗಳನ್ನು ಸಿಂಡಿಕೇಟು ಸಭೆಗಳಲ್ಲಿ ಪ್ರಸ್ತುತಪಡಿಸುವಾಗ ನಿಗದಿತ ಕಾಲಮಿತಿ 2 ರಿಂದ 3 ನಿಮಿಷಗಳನ್ನು ನಿಗದಿಗೊಳಿಸಿದರೆ ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ದೊರೆತು ಸಮಯದ ಸದುಪಯೋಗವನ್ನು ಮಾಡಿಕೊಳ್ಳಬಹುದಾಗಿದ್ದು, ಈ ನಿರ್ಣಯವನ್ನು ಎಲ್ಲಾ ಸಿಂಡಿಕೇಟು ಸದಸ್ಯರು ಪಾಲಿಸಬೇಕೆಂಬುದಾಗಿ ಸಿಂಡಿಕೇಟು ಸರ್ವಾನುಮತದಿಂದ ನಿರ್ಣಯಿಸಿತು. ತಾವು ಮಂಡಿಸುವ ಪ್ರಸ್ತಾವನೆಗಳಿಗೆ ಸಂಬಂಧಿಸಿ, ಕರಡು ನಿರ್ಣಯಗಳನ್ನು ತಯಾರಿಸಬಹುದಾಗಿದ್ದರೆ ಸದರಿ ಕರಡು ನಿರ್ಣಯಗಳೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಸದಸ್ಯರುಗಳಿಗೆ ತಿಳಿಸಲಾಯಿತು.

6. ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ (website)ದಲ್ಲಿ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಕಾಲಕಾಲಕ್ಕೆ ನವೀಕರಿಸಿ, ಜಾಲತಾಣವನ್ನು ಆಧುನೀಕರಣಗೊಳಿಸಲು ಸಂಬಂಧಪಟ್ಟ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

7. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜಾರಿಗೆ ತರಲಾದ ರಾಷ್ಟ್ರೀಯ ಶಿಕ್ಷಣ ನೀತಿ –2020ಕ್ಕೆ ಸಂಬಂಧಿಸಿ, ಸಿಂಡಿಕೇಟು ಸದಸ್ಯರುಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಉಪಸಮಿತಿಗಳ ಸಭೆಗಳಿಗೆ ಆದ್ಯತೆಯ ಮೇರೆಗೆ ಇತರ ಪರಿಣಿತ/ತಜ್ಞರನ್ನು ಸಹ ಆಯ್ಕೆ (co-opt) ಮಾಡಿಕೊಳ್ಳಬಹುದೆಂಬುದಾಗಿ ಅಥವಾ ವಿಶೇಷ ಆಹ್ವಾನಿತರನ್ನಾಗಿ ಆಮಂತ್ರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

8. ಸಂಶೋಧನಾ ವಿದ್ಯಾರ್ಥಿಗಳು ತಡರಾತ್ರಿಯವರೆಗೆ ತಮ್ಮ ವಿಭಾಗಗಳಲ್ಲಿ ಪ್ರಾಯೋಗಿಕ ಕಾರ್ಯಗಳಿಗೆ ಸಂಬಂಧಿಸಿ ಉಳಿದುಕೊಳ್ಳುವ ವಿಚಾರವನ್ನು ಸಿಂಡಿಕೇಟು ಸಭೆಯು ಗಂಭೀರವಾಗಿ ಪರಿಗಣಿಸಿತು. ಸಂಶೋಧನಾ ವಿದ್ಯಾರ್ಥಿಗಳು ರಾತ್ರಿ ಗಂಟೆ 11.00ರ ನಂತರ ವಿಭಾಗ/ಪ್ರಯೋಗಾಲಯಗಳಲ್ಲಿ ಉಳಿದುಕೊಳ್ಳುವ ಸಂದರ್ಭಗಳಿದ್ದಲ್ಲಿ, ತಮ್ಮ ವಿಭಾಗದ ಅಧ್ಯಕ್ಷರ ಲಿಖಿತ ಪೂರ್ವಾನುಮತಿಯನ್ನು ಪಡೆಯುವಂತೆ ತಿಳಿಸಲು ತೀರ್ಮಾನಿಸಲಾಯಿತು. ಪ್ರತೀ ಎರಡು ಗಂಟೆಗಳಿಗೊಮ್ಮೆ ಎಚ್ಚರಿಕೆಯನ್ನು ನೀಡುವಂತೆ ಮತ್ತು ಸದರಿ ಮಾಹಿತಿಯನ್ನು ಸೆಕ್ಯೂರಿಟಿ ಸಿಬ್ಬಂದಿಯ ಗಮನಕ್ಕೆ ತಂದು ಸಂಬಂಧಪಟ್ಟ ವಿಭಾಗದಲ್ಲಿ ಕಾರ್ಯನಿರ್ವಹಿಸುವಂತೆ ವಿಭಾಗದ ಅಧ್ಯಕ್ಷರಿಗೆ ಸೂಚಿಸಲು ನಿರ್ಣಯಿಸಲಾಯಿತು.

9. ಸಿಂಡಿಕೇಟು ಸದಸ್ಯರು ಅಪೇಕ್ಷಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿರುವ ಸಂಶೋಧನಾ ವಿದ್ಯಾರ್ಥಿಗಳ ವಿವರ, ಶಿಷ್ಯ ವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳ ನೋಂದಣಿ ಮಾಡಿದ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ತಿಳಿಸಲಾಯಿತು.

10. ಪರೀಕ್ಷಾ ಕೈಪಿಡಿಗೆ ಸಂಬಂಧಿಸಿದ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಲು ಈಗಾಗಲೇ ಸಿಂಡಿಕೇಟು ಸಭೆಯ ನಿರ್ಣಯದನ್ವಯ ರಚಿಸಲಾದ ಸಮಿತಿಯಲ್ಲಿಯೇ ತಿದ್ದುಪಡಿಗೆ ಶೀಘ್ರ ಕ್ರಮಕೈಗೊಳ್ಳಬೇಕಾಗಿ ತಿಳಿಸಲಾಯಿತು.

11. Collaborative research work ವಿಶ್ವವಿದ್ಯಾನಿಲಯದಲ್ಲಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಿಂದ ತೇರ್ಗಡೆ ಹೊಂದಿದ ಹೊರ ರಾಜ್ಯ / ಹೊರ ದೇಶಗಳಲ್ಲಿ ಸಂಶೋಧನಾ

ಸ್ಥಾನದಲ್ಲಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿ ಅವರಿಂದ Collaborative research workನ್ನು ಕೈಗೊಳ್ಳಲು ಒತ್ತು ನೀಡುವ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ಕ್ರಮಕೈಗೊಳ್ಳುವುದು. ಪ್ರತೀ ಮೂರು ತಿಂಗಳಿಗೊಮ್ಮೆ ಸದರಿ ಸಂಶೋಧಕರ ಮಾಹಿತಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಬೇಕಾಗಿ ತಿಳಿಸಲಾಯಿತು.

12. ಡಾ. ಉದಯ ಕುಮಾರ್ ಎಂ. ಎ., ನಿಕಟಪೂರ್ವ ಪ್ರಭಾರ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಶೇರ್ ಮಾಡಿದ ಬರಹಗಳ ಅಭಿಪ್ರಾಯಗಳು ವಿಶ್ವವಿದ್ಯಾನಿಲಯದ ಗೌರವಕ್ಕೆ ಚ್ಯುತಿ ತರುವಂತಿದೆ. ವಿಶ್ವವಿದ್ಯಾನಿಲಯದ ಉದ್ಯೋಗಿಯಾಗಿ ವಿಶ್ವವಿದ್ಯಾನಿಲಯದ ವಿರುದ್ಧದ ಹೇಳಿಕೆಗಳನ್ನು ಹಂಚಿಕೊಳ್ಳುವ ಮೂಲಕ ಶಿಸ್ತು ಉಲ್ಲಂಘಿಸಿರುತ್ತಾರೆ. ಈ ಬಗ್ಗೆ ಅವರಿಗೆ ಕಾರಣ ಕೇಳಿ ನೋಟೀಸು ನೀಡಲು ತೀರ್ಮಾನಿಸಲಾಯಿತು.

13. ಡಾ. ರಾಮಕೃಷ್ಣ ಬಿ. ಎಂ. ಪ್ರಾಂಶುಪಾಲರು (ಪ್ರಭಾರ), ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಡಾ. ಅಬೋಕ್ಕರ್ ಸಿದ್ದೀಕಿ, ಸಂಯೋಜಕರು, ಸ್ನಾತಕೋತ್ತರ ವಾಣಿಜ್ಯ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರುಗಳನ್ನು ಮರಳಿ ತಮ್ಮ ಮಾತೃ ವಿಭಾಗಳಿಗೆ ವರ್ಗಾಯಿಸಲು ನಿರ್ಣಯಿಸಲಾಯಿತು.

14. ನ್ಯಾಕ್ ಮಾನ್ಯತಾ ಸಮಿತಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವವರೆಗೆ ಸ್ನಾತಕೊತ್ತರ ವಿಭಾಗದ ಯಾವುದೇ ಶಿಕ್ಷಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲು ಸಾಧ್ಯವಾಗುವುದಿಲ್ಲ ಎಂಬುದಾಗಿ ನಿರ್ಣಯಿಸಲಾಯಿತು.

15. ಶೈಕ್ಷಣಿಕ ವರ್ಷ 2020–21ನೇ ಸಾಲಿನ ಪದವಿ ಕಾಲೇಜುಗಳ ತರಗತಿಗಳನ್ನು ಸರಕಾರದ ಸೂಚನೆ ಮೇರೆಗೆ ಕೋವಿಡ್–19 ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ದಿನಾಂಕ 17.11.2020ರಂದು ಪ್ರಾರಂಭಿಸಲು ನಿರ್ಣಯಿಸಲಾಯಿತು.

16. ರಾಷ್ಟ್ರೀಯ ಶಿಕ್ಷಣ ನೀತಿ – 2020 ಇದರ ಬಗ್ಗೆ ಕರ್ನಾಟಕದ ಜನತೆಗೆ ಅರಿವು ಮತ್ತು ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ಅಧ್ಯಾಯಗಳನ್ನು ಕನ್ನಡದಲ್ಲಿ video ಕಾರ್ಯಾಗಾರ ಹಮ್ಮಿಕೊಳ್ಳುವಂತೆ ನಿರ್ಣಯಿಸಲಾಯಿತು.

17. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈ ಕೆಳಗಿನ ಲೆಕ್ಕ ಪರಿಶೋಧಕರ (Chartered Accountant ) ಸೇವೆಯನ್ನು ಬಳಸಿಕೊಳ್ಳಲು ನಿರ್ಣಯಿಸಲಾಯಿತು.

1. M/s. Kamath and Kamath Associates<br>M.Vaman Kamath (Partner)<br>13-14, 3rd floor Manasa Towers<br>M.G. Road, Kodialbail, Mangalore -03.

2. M/s. Kamath and Rao<br>Kudumal Ranga Rao, Karangalpady<br>Mangalore-03

3. M/s. Rao and Basri<br>Citypoint, III Floor, Kodialbail

Mangalore.

4. Sri Shanthram Shetty
Church Hall, Ist Floor, Parvathi Palace
Opp. Bejai, Mangalore-04.

5. Sri S Krishna Mohan
13/1/16-19, Bharath Building
3rd Floor, P M Rao Road
Hampankatta, Mangalore -01.

18. ವಿಶ್ವವಿದ್ಯಾನಿಲಯವು ಒಂದು ಸರಕಾರಿ ಸೌಮ್ಯದ ಸಂಸ್ಥೆಯಾಗಿದ್ದು, ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳಿಗೆ ತೆರಿಗೆ ಮತ್ತು ದಂಡ ಪಾವತಿಸಲು ತಿಳಿಸಿರುವ ಹಿನ್ನೆಲೆಯಲ್ಲಿ Additional Commissioner, ಬೆಳಗಾವಿ ಇವರು ಪತ್ರ ಮುಖೇನ ಪಾವತಿಸಲು ಆದೇಶಿಸಿರುವುದರಿಂದ ಈ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ಸಿಂಡಿಕೇಟು ನಿರ್ಣಯಿಸಿತು.

19. ವಿಶ್ವವಿದ್ಯಾನಿಲಯದಲ್ಲಿ ಅಸ್ತಿತ್ವದಲ್ಲಿರುವ RESEARCH & CONSULTANCY PROMOTION ಘಟಕದ ನಿರ್ದೇಶಕರು ಸದರಿ ಘಟಕದ ವತಿಯಿಂದ ನಡೆಸಲಾಗುತ್ತಿರುವ ಕಾರ್ಯವೈಖರಿಯನ್ನು ಸಿಂಡಿಕೇಟು ಸಭೆಯ ಮುಂದೆ ಪ್ರಸ್ತುತ ಪಡಿಸಿರುವ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನಾ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬೇಕಾಗಿ ಸಲಹೆ ನೀಡಲಾಯಿತು. ಒಂದು ಯೋಜಿತ ರೂಪುರೇಷೆಯನ್ನು ಸಿದ್ದಪಡಿಸಿಕೊಂಡು ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಕೋಟೆಗಾರ್ ಇವರ ಸಲಹೆಯೊಂದಿಗೆ ತಯಾರಿಸಿಕೊಳ್ಳಲು ಸಲಹೆ ನೀಡಲಾಯಿತು. RESEARCH & CONSULTANCY PROMOTION ಘಟಕವನ್ನು RESEARCH DEVELOPMENT CONSULTANCY AND PATENT CELL ಎಂಬುದಾಗಿ ಮರುನಾಮಕರಣ ಮಾಡಲು ನಿರ್ಧರಿಸಲಾಯಿತು.

20. ಮುಂದಿನ ಸಿಂಡಿಕೇಟು ಸಭೆಯನ್ನು ಡಿಸೆಂಬರ್ 17, 2020 ರಂದು ನಡೆಸಲು ನಿರ್ಣಯಿಸಲಾಯಿತು.

ಮಾನ್ಯ ಸಿಂಡಿಕೇಟು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |